## ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1577
ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 18.03.2021

| ಕ್ರ ಸಂ: | ಪ್ರಶ್ನೆ | ಉತ್ತರ |
|---|---|---|
| ಅ) | ವಿಜಯಪುರ ಜಿಲ್ಲೆಯಲ್ಲಿ ಹಮ್ಮಿಕೊಂಡಿರುವ ಸಮಗ್ರ ನೀರಾವರಿ ಯೋಜನೆಗಳಾವುವು; | ವಿಜಯಪುರ ಜಿಲ್ಲೆಯಲ್ಲಿ ಹಮ್ಮಿಕೊಂಡಿರುವ ನೀರಾವರಿ ಯೋಜನೆಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| ಆ) | ನೀರಾವರಿ ಯೋಜನೆ ಗಳನ್ನು ಸಂಪೂರ್ಣಗೊಳಿಸಲು ಸರ್ಕಾರ ನಿಗದಿಪಡಿಸಿರುವ ಸಮಯ ಎಷ್ಟು; | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಲ್ಲಿ ಆಲಮಟ್ಟಿ ಜಲಾಶಯದಡಿ ನೀರಿನ ಸಂಗ್ರಹಣೆ ಮಟ್ಟ ಆರ್.ಎಲ್. 519.60 ರಿಂದ ಆರ್.ಎಲ್. 524.256 ಮೀ.ಗೆ ಎತ್ತರಿಸುವುದು ಹಾಗೂ ಹಂಚಿಕೆಯಾದ 130 ಟಿ.ಎಂ.ಸಿ ನೀರಿನ ಬಳಕೆಯು ಕೃಷ್ಣಾ ನ್ಯಾಯಾಧೀಕರಣ-2 ರ ತೀರ್ಪಿನ ಗೆಜೆಟ್ ಅಧಿಸೂಚನೆಗೆ ಒಳಪಟ್ಟಿರುತ್ತದೆ.<br><br>ಸದರಿ ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪಿನ ಗೆಜೆಟ್ ಅಧಿಸೂಚನೆ ಕಾಯ್ದಿರಿಸಿ ಪೂರ್ವಬಾವಿಯಾಗಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಲ್ಲಿಯ ಯೋಜನೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಈ ಪೈಕಿ ವಿಜಯಪುರ ಜಿಲ್ಲೆ ಸಂಬಂಧಿಸಿದಂತೆ ಮುಳವಾಡ ಏತ ನೀರಾವರಿ, ಚಿಮ್ಮಲಗಿ ಏತ ನೀರಾವರಿ ಮತ್ತು ಇಂಡಿ ಏತ ನೀರಾವರಿ ವಿಸ್ತರಣೆ ಯೋಜನೆಗಳಡಿಯ ಮುಖ್ಯ ಸ್ಥಾವರ ಕಾಮಗಾರಿಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಿದ್ದು, ಪ್ರಾಯೋಗಿಕವಾಗಿ ಕಾರ್ಯಾರಂಭಗೊಳಿಸಲಾಗಿದೆ. ಇದಲ್ಲದೇ, ಮುಖ್ಯ /ಶಾಖಾ ಕಾಲುವೆ ಮತ್ತು ವಿತರಣಾ ಕಾಲುವೆ ಜಾಲಗಳ ನಿರ್ಮಾಣ ಕಾಮಗಾರಿಗಳನ್ನು ಮುಂದುವರೆಸುತ್ತಾ ಆದ್ಯತೆಯ ಮೇರೆಗೆ ಕಾರ್ಯಗತಗೊಳಿಸಲಾಗುತ್ತಿದೆ. ಮುಂದುವರೆದು, ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಡಿ ಬರುವ ಉಪಯೋಜನೆಗಳ ಕಾಲುವೆ ಜಾಲಗಳಿಂದ ಅಚ್ಚುಕಟ್ಟು ವ್ಯಾಪ್ತಿಯಲ್ಲಿಯ ಸಣ್ಣ ನೀರಾವರಿ/ಜಿಲ್ಲಾ ಪಂಚಾಯತ್ ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿಗಳನ್ನು ಸಹ ಕೈಗೆತ್ತಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ.<br><br>ಪ್ರಸ್ತುತ ಪ್ರಗತಿಯಲ್ಲಿರುವ ವಿಜಯಪುರ ಜಿಲ್ಲೆಯಡಿಯ ನೀರಾವರಿ ಯೋಜನೆಗಳನ್ನು ಆರ್ಥಿಕ ಲಭ್ಯತೆಗೆ ಅನುಗುಣವಾಗಿ ಆದ್ಯತೆಯ ಮೇರೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. |
| ಇ) | ಯಾವ ಯಾವ ಯೋಜನೆ ಗಳು ಪೂರ್ಣಗೊಂಡಿವೆ; ಹಾಲಿ ನಡೆಯುತ್ತಿರುವ ಯೋಜನೆಗಳ ಸಂಪೂರ್ಣ ವಿವರ ಒದಗಿಸುವುದು? | ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |

ಸಂಖ್ಯೆ: ಜಸಂಇ 44 ಡಬ್ಲ್ಯೂಬಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

## ಚುಕ್ಕೆ ಗುರುತಿನ ಪ್ರಶ್ನೆ ಸಂ.1577 ಕ್ಕೆ ಅನುಬಂಧ

### ವಿಜಯಪುರ ಜಿಲ್ಲೆ ವ್ಯಾಪ್ತಿಯಲ್ಲಿ ಕೈಗೆತ್ತಿಕೊಂಡು ಪೂರ್ಣಗೊಂಡಿರುವ / ಪ್ರಗತಿಯಲ್ಲಿರುವ ಯೋಜನೆ/ ಕಾಮಗಾರಿಗಳ ವಿವರಗಳು

| ಕ್ರ ಸಂ. | ಯೋಜನೆ ಹೆಸರು | ಷರಾ |
|---|---|---|
| (ಅ) | ಪೂರ್ಣಗೊಂಡಿರುವ ಯೋಜನೆಗಳು: | |
| 1 | ಆಲಮಟ್ಟಿ ಎಡದಂಡೆ ಕಾಲುವೆ | 14,600 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ. |
| 2 | ಮುಳವಾಡ ಏತ ನೀರಾವರಿ ಹಂತ-1&2 | 24,990 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ. |
| 3 | ಇಂಡಿ ಶಾಖಾ ಕಾಲುವೆಯಿಂದ | 1,00,429 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ. |
| 4 | ಇಂಡಿ ಏತ ನೀರಾವರಿ ಯೋಜನೆ (ಕಿ.ಮೀ.0.00 ರಿಂದ 97.30 ರವರೆಗೆ) | 37,900 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ. |
| (ಆ) | ಪ್ರಗತಿಯಲ್ಲಿರುವ ಯೋಜನೆಗಳು: | |
| 1 | ಕೃಮೇ.ಯೋ. ಹಂತ-3ರಡಿ ಮುಳವಾಡ ಏತ ನೀರಾವರಿ ಯೋಜನೆ ಹಂತ -3 | ಪ್ರಗತಿಯಲ್ಲಿದೆ |
| 2 | ಕೃಮೇ.ಯೋ ಹಂತ-3ರಡಿ ಚಿಮ್ಮಲಗಿ ಏತ ನೀರಾವರಿ ಯೋಜನೆ | |
| 3 | ಕೃಮೇ.ಯೋ ಹಂತ-3ರಡಿ ಇಂಡಿ ಏತ ನೀರಾವರಿ ಯೋಜನೆ | |
| 4 | ಕೋರ್ತಿ-ಕೊಲ್ಹಾರ್ ಸೇತುವೆ ಪುನಃಶ್ಚೇತನ | |
| 5 | ಆಲಮಟ್ಟಿ ಎಡದಂಡೆ ಕಾಲುವೆ ಆಧುನೀಕರಣ ಯೋಜನೆ | |
| 6 | ನಾಗರಬೆಟ್ಟ ಏತ ನೀರಾವರಿ ಯೋಜನೆ | |
| 7 | ಚಡಚಣ ಏತ ನೀರಾವರಿ ಯೋಜನೆ | |
| 8 | ತುಬಚಿ-ಬಬಲೇಶ್ವರ ಏತ ನೀರಾವರಿ | |
| 9 | ಬೂದಿಹಾಳ-ಪೀರಾಪುರ ಏತ ನೀರಾವರಿ ಯೋಜನೆ | |
| 10 | ವಿಜಯಾಪೂರ ಜಿಲ್ಲೆಯಡಿ ಮಮದಾಪೂರ, ಭೂತನಾಳ, ಬೇಗಂ-ತಲಾಬ್ & ಇತರೆ ಕೆರೆ ತುಂಬುವ ಯೋಜನೆ | ಪೂರ್ಣಗೊಂಡಿದ್ದು ನಿರ್ವಹಣೆ ಹಂತದಲ್ಲಿದೆ |
| 11 | ಬೇಗಂ ತಲಾಬ್ ಕೆರೆಯ ಜಲಾಭಿವೃದ್ಧಿ ಕಾಮಗಾರಿ | ಪೂರ್ಣಗೊಳ್ಳುವ ಹಂತದಲ್ಲಿದೆ |
| 12 | ವಿಶ್ವ ಬ್ಯಾಂಕ ನೆರವಿನಡಿ ಆಲಮಟ್ಟಿ & ನಾರಾಯಣಪೂರ ಆಣೆಕಟ್ಟುಗಳ ಪುನಃಶ್ಚೇತನ ಅಭಿವೃದ್ಧಿ ಕಾಮಗಾರಿಗಳು | ಬಹುತೇಕ ಪೂರ್ಣಗೊಂಡಿವೆ |
| 13 | ಎನ್‌ಎಲ್‌ಬಿಸಿ, ಎಸ್‌ಬಿಸಿ, ಎಂಬಿಸಿ, ಜೆಬಿಸಿ & ಐಬಿಸಿ ಸ್ಕಾಡಾ ಹಂತ-2ರ ಯೋಜನೆ | ಸದರಿ ಪ್ಯಾಕೇಜ್ ಕಾಮಗಾರಿಯಲ್ಲಿ ಐಬಿಸಿ ಸ್ಕಾಡಾ ಹಂತ-2ರ ಅನುಷ್ಠಾನ ಒಳಗೊಂಡಿದ್ದು, ಪ್ರಗತಿಯಲ್ಲಿದೆ. |